ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.   37/2019

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :-  ಚಲುವಯ್ಯ
ತಂದೆಯ  ಹೆಸರು    :- ಕುಂಟಯ್ಯ
ವಯಸ್ಸು           :-    75 ವರ್ಷ
ಉದ್ಯೋಗ          :-   ವ್ಯವಸಾಯ
ವಾಸ              :-   ಅರಳಿಮರದದೊಡ್ಡಿ

**<u>ಸಾಕ್ಷಿಗೆ ದಿಃ 29.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು</u>.**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಚಾಸಾ 1 ನನ್ನ ಮಗ. ಚಾಸಾ 3 ನನ್ನ ಹೆಂಡತಿ ಆರೋಪಿತರು ನನಗೆ ಗೊತ್ತು. ನನ್ನ ತಂದೆ ಸೀಗೆಕೊಪ್ಪಲುದಲ್ಲಿ 15 ಗುಂಟೆ ಜಮೀನನ್ನು ತಗೆದುಕೊಂಡಿದ್ದು ನಾನು ನನ್ನ ತಮ್ಮ ಬೆಟ್ಟಯ್ಯ ನನ್ನ ತಂದೆ ಜೀವಂತ ಇದ್ದಾಗ ಬಾಗ ಮಾಡಿಕೊಂಡಿರುತ್ತೇನೆ. ಜಮೀನು ನಮಗೆ ಬರಬೇಕೆಂದು 6-7 ವರ್ಷಗಳ ಹಿಂದೆ ಬೆಟ್ಟಯ್ಯ ನನ್ನ ಭುಜಕ್ಕೆ ಕೈಯಿಂದ ಹೊಡೆದಿರುತ್ತಾರೆ. ಚಾಸಾ 1 ನನ್ನ ತಂದೆಗೆ ಏಕೆ ಹೊಡೆಯುತ್ತೀರಾ ಎಂದರೆ ಕೇಳಿದಕ್ಕೆ ಆರೋಪಿ 1 ಮತ್ತು 2 ದೊಣ್ಣೆಯಿಂದ ಬಲಪಕ್ಕಗೆ ಹೊಡೆದಿರುತ್ತಾರೆ. ಚಾಸಾ 3 ಮನೆಯ ಬಳಿ ಕುಳಿತಿದ್ದು ಗಲಾಟೆಯ ಬಗ್ಗೆ ತಿಳಿದು ಸ್ಥಳಕ್ಕೆ ಬಂದಾಗ ಆರೋಪಿ 1 ಮತ್ತು 2 ಅವರು ಅವರ ಸೀರೆಯನ್ನು ಹಿಡಿದು ಎಳೆದಾಡಿ ಅವರಿಗೆ ಅವಮಾನ ಮಾಡಿರುತ್ತಾರೆ. ನಂತರ ದೂರನ್ನು ನೀಡಿರುತ್ತಾರೆ ಗ್ರಾಮಸ್ಥರು ಸೇರಿ ರಾಜಿ ಮಾಡೋಣಾ ಎಂದು ಹೇಳಿದಕ್ಕೆ ನಾವು ದೂರನ್ನು ನೀಡಿರುವುದಿಲ್ಲ ಬೆಟ್ಟಯ್ಯ ಅವರು ದೂರನ್ನು ನೀಡಿದ್ದು ನಾವು 1 ದಿನ ತಡವಾಗಿ ದೂರನ್ನು ನೀಡಿರುತ್ತೇವೆ. ನಾವು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಮು. ಮಾ. ಅನ್ನು ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ  ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.</u>**

ನಮ್ಮ ತಂದೆಯ ಪಿತ್ರಾರ್ಜಿತ ಜಮೀನು ಸರ್ವೆ ನಂ 50/7 ಮತ್ತು 50/8 ರಲ್ಲಿ 15 ಗುಂಟೆ ಜಮೀನು ಇದ್ದು ನನಗೂ ಮತ್ತು ನನ್ನ ತಮ್ಮನಿಗೆ ಸಮನಾದ ಭಾಗ ಇದ್ದು ನಾವು

ಸಮನಾಗಿ ಅನುಭವದಲ್ಲಿದ್ದೇವೆ ಎಂದರೆ ಸರಿ. ಬೇಟ್ಟಯ್ಯ ಅವರು ಪೂರ್ತಿ ಜಮೀನು ನನಗೆ ಬರಬೇಕು ನಿನಗೆ ಭಾಗ ಕೊಡುವುದಿಲ್ಲವೆಂದು ಹೇಳಿ ಜಮೀನಿಗೆ ಹೋಗದಂತೆ ತಕರಾರು ಮಾಡುತ್ತಿದ್ದು ನಾನು ಅರ್ಧ ಜಮೀನು ಬಿಟ್ಟುಕೊಡುವಂತೆ ಹೇಳಿದಕ್ಕೆ ಆರೋಪಿತರು ನಮ್ಮ ಮೇಲೆ ದೌರ್ಜನ್ಯ ಮಾಡಿ ತೊಂದರೆ ಕೊಡುತ್ತಿದ್ದರು ಎಂದರೆ ಸರಿ. ಊರಿನ ಗ್ರಾಮಸ್ಥರು ಪಿತ್ರಾರ್ಜಿತ ಆಸ್ತಿ ಇದ್ದು ಇಬ್ಬರೂ ಸಮನಾಗಿ ಭಾಗ ಮಾಡಿಕೊಳ್ಳುವಂತೆ ಹೇಳಿದ್ದರೂ ಸಹ ತೊಂದರೆ ಕೊಡುತ್ತಿದ್ದರು ಎಂದರೆ ಸರಿ.

ದಿನಾಂಕ 12.01.2019 ರಂದು ಮದ್ಯಾಹ್ನ 12.30 ರ ಸಮಯದಲ್ಲಿ ನಾನು ಚಾಸಾ 1, 3 ಮತ್ತು 4 ಮನೆಯ ಬಳಿ ಇರುವಾಗ ಆರೋಪಿತರು ಇಲ್ಲಿಗೆ ಬಂದು ಬಾಯಿಗೆ ಬಂದಂತೆ ಲೋಪರ್ ನನ್ನ ಮಕ್ಕಳಾ ಈ ಜಮೀನು ನನಗೆ ಸೇರಿದ್ದು ಈ ಜಮೀನು ಹತ್ತಿರ ಹೇಗೆ ಬರುತ್ತೀರಾ ಬನ್ನಿ ನೋಡಿಕೊಳ್ಳುತ್ತೇನೆಂದು ಬೈಯುತ್ತಿದ್ದರು ಎಂದರೆ ಸರಿ. ಚಾಸಾ 1 ಅವರು ಕೇಳಲು ಹೋದಾಗ ಅವರ ಕೊರಳ ಪಟ್ಟಿಯನ್ನು ಹಿಡಿದು ಅವರನ್ನು ಕಳಗೆ ಕೆಡವಿರುತ್ತಾರೆ ಎಂದರೆ ಸರಿ. ನಾನು ಚಾಸಾ 1 ಅವರನ್ನು ಬಿಡಿಸಿಕೊಳ್ಳಲು ಹೋದಾಗ ಕೈಯಿಂದ ಭುಜಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ 3 ಬಿಡಿಸಿಕೊಳ್ಳಲು ಹೋದಾಗ ಅವರ ಸೀರೆಯನ್ನು ಹಿಡಿದು ಎಳೆದಾಡಿ ಕೆಳಗೆ ನುಕಿ ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 2 ಚಾಸಾ 1 ಅವರಿಗೆ ಕಾಲಿನಿಂದ ಒದ್ದು ನೋವುಂಟು ಮಾಡಿ ನೀವೇನಾದರೂ ಜಮೀನಿನ ಹತ್ತಿರ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆಗ ಚಾಸಾ 5 ಮತ್ತು 6 ಅವರು ಬಂದು ಜಗಳ ಬಿಡಿಸಿ ಸಮಾಧಾನ ಮಾಡಿರುತ್ತಾರೆ ಎಂದರೆ ಸರಿ.

**ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.